# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]

ನಿಗಮ ಕಚೇರಿ, ನವನಗರ, ಪೂ.ಬೆಂ. ರಸ್ತೆ, ಹುಬ್ಬಳ್ಳಿ-580 025.

# HUBLI ELECTRICITY SUPPLY COMPANY LIMITED

[Wholly owned Govt. of Karnataka undertaking]

Corporate Office,
Navanagar,P.B. Road, Hubli-580 025.

Telephone No. : 0836-2322771
Fax No. : 0836-2324307
: 0836-2223865

Web Site : www.hescom.co.in
E-mail ID : md@hescom.co.in
: aoadminhescom@gmail.com


ಕ್ರ. ಸಂ. ಹುವಿಸಕಂನಿ/ಪ್ರವ್ಯ(ಆ)/ಲೆ(ಆ)/ಸಲೆ(ಆ)/ಸಿಆರ್-08/2010-11/ಸಿವಾಯ್‌ಎಸ್- 2670 ದಿನಾಂಕ: 19 NOV 2015

- ಮುಖ್ಯ ಇಂಜಿನೀಯರ್(ವಿ.),
  ಹುಬ್ಬಳ್ಳಿ/ ಬೆಳಗಾವಿ ವಲಯ, ಹುವಿಸಕಂನಿ.
- ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ.) /
- ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ.) /
- ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ.),
  ಹುವಿಸಕಂನಿ.

"ತುರ್ತು ಅನುಷ್ಠಾನಕ್ಕೆ"

**ವಿಷಯ :** ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಎನ್ 267 ಸಮನ್ವಯ 2015, ದಿನಾಂಕ: 29.10.2015.

*****

ಆಡಳಿತದಲ್ಲಿ ಸಂಪೂರ್ಣ ಕನ್ನಡ ಅನುಷ್ಠಾನಗೊಳಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸದರಿ ಟಿಪ್ಪಣಿಯಲ್ಲಿ ವಿವರಿಸಲಾಗಿದೆ ಎಂದು ತಿಳಿಸಿ. ಅದರನ್ವಯ, ತುರ್ತಾಗಿ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರು ನಿರ್ದೇಶಿಸಿದ್ದಾರೆ. ಅದ್ದರಿಂದ, ಉಲ್ಲೇಖದಲ್ಲಿನ ಪತ್ರವನ್ನು ಲಗತ್ತಿಟ್ಟು, ಹು.ವಿ.ಸ.ಕಂ.ನಿ.ಯ ಎಲ್ಲಾ ಕಛೇರಿಯ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

19/11

**ಪ್ರಧಾನ ವ್ಯವಸ್ಥಾಪಕರು**
**(ಆಡಳಿತ ಮತ್ತು ಮಾಸಂಅ)**

**ಪ್ರತಿ: ಗೌರವ ಪೂರ್ವಕ ಮಾಹಿತಿಗಾಗಿ :**

1. ಆಪ್ತ ಕಾರ್ಯದರ್ಶಿಗಳು[ಸರ್ಕಾರದ ಅಧೀನ ಕಾರ್ಯದರ್ಶಿ], ಇಂದನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು- ಮಾನ್ಯರ ಅವಗಾನೆಗೆ ತರಲು ಕೋರಲಾಗಿದೆ..

**ಪ್ರತಿಯನ್ನು ಮಾಹಿತಿಗಾಗಿ:**

2. ನಿಯಂತ್ರಣಾಧಿಕಾರಿ(ಆಂ.ಪ)/(ಲೆ.&ಕಂ.), ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
3. ಆಪ್ತ ಕಾರ್ಯದರ್ಶಿ[ವ್ಯ.ನಿ.], ಹುವಿಸಕಂನಿ, ಕಂಪನಿ ಕಾರ್ಯಾಲಯ, ಹುಬ್ಬಳ್ಳಿ - ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾನೆಗೆ ತರಲು ಕೋರಲಾಗಿದೆ.

LN - 13893
16/11/15

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 267 ಸಮನ್ವಯ 2015
(ಲಗತ್ತು - 8 ಪ್ರತಿಗಳು)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 29.10.2015

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು-560 001.

M. D. HESCOM.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
5. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗಾ.
7. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿ., ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು.
11. ಮುಖ್ಯ ವಿದ್ಯುತ್ ಪರಿವೀಕ್ಷಕರು, ನಂ.32/1-2, 2ನೇ ಮಹಡಿ, ಕ್ರೆಸೆಂಟ್ ರಸ್ತೆ, ಬೆಂಗಳೂರು.

Corporate Office,
HESCOM, Hubli.

| | | |
|---|---|---|
| 1 | AO (Admin) | ✓ |
| 2 | AO (I/m) | |
| 3 | EE (HRD) | |
| 4 | LAW | |
| | | |
| | | |

ಮಾನ್ಯರೇ,

ವಿಷಯ: ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ರವರ ಟಿಪ್ಪಣಿ ದಿನಾಂಕ: 17.10.2015.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸಮ ಸಂಖ್ಯೆಯ ದಿನಾಂಕ:13.10.2015 ರ ಪತ್ರವನ್ನು ಮುಂದುವರೆಸುತ್ತಾ, ಉಲ್ಲೇಖಿತ ಟಿಪ್ಪಣಿಯನ್ನು ಇದರೊಂದಿಗೆ ಲಗತ್ತಿಸಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಜಂಟಿಯಾಗಿ ದಿನಾಂಕ:17.10.2015ರಂದು ಆಯೋಜಿಸಿದ್ದ ಸಭೆಯಲ್ಲಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಭಾಗವಹಿಸಿದ್ದರು. ಆಡಳಿತದಲ್ಲಿ ಸಂಪೂರ್ಣ ಕನ್ನಡ ಅನುಷ್ಠಾನಗೊಳಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸದರಿ ಟಿಪ್ಪಣಿಯಲ್ಲಿ ವಿವರಿಸಲಾಗಿದೆ. ಅದರನ್ವಯ, ತುರ್ತಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

- ಎಲ್ಲಾ ನಿಗಮ/ಮಂಡಳಿ/ಇಲಾಖೆಯ ಜಾಲತಾಣಗಳು ಕಡ್ಡಾಯವಾಗಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಇರತಕ್ಕದ್ದು, ಅಂತಹ ಜಾಲತಾಣಗಳು ತೆರೆದುಕೊಂಡಾಗ ಪ್ರಥಮವಾಗಿ ಕನ್ನಡ ಭಾಷೆಯ ಜಾಲತಾಣ ಗೋಚರಿಸತಕ್ಕದ್ದು.

AO (Adm)
17/11/15

17-11-15

....2)

- ಇನ್ನು ಮುಂದೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಎಲ್ಲಾ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳ ನೇಮಕಾತಿಯ ಅರ್ಹತೆಗಾಗಿ ಸಿ.ಆ.ಸು. ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿ.ಆ.ಸು.ಇ 19 ಎಸ್‌ಸಿಆರ್ 2006(ಭಾ), ದಿನಾಂಕ: 07.06.2007 ರನ್ವಯ ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆ/ಆದೇಶಗಳನ್ವಯ ಕನ್ನಡ ಭಾಷೆಯ ಅರ್ಹತಾ ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸಲು ತಮ್ಮ ತಮ್ಮ C&R ಹಾಗೂ R&P ನಿಯಮಗಳಲ್ಲಿ ಸೇರ್ಪಡೆ ಮಾಡಿಕೊಳ್ಳತಕ್ಕದ್ದು.
- ಎಲ್ಲಾ ನಿಗಮ/ಮಂಡಳಿ/ಇಲಾಖೆಗಳ ಸರ್ಕಾರಿ/ಕಂಪನಿಗಳ ವಾಹನಗಳ ನೋಂದಣಿ ಸಂಖ್ಯೆಗಳನ್ನು ಈಗಿರುವ ಆಂಗ್ಲ ಭಾಷೆಯ ನಂಬರ್ ಪ್ಲೇಟ್‌ನೊಂದಿಗೆ ಪ್ರತ್ಯೇಕವಾಗಿ ಕನ್ನಡ ಭಾಷೆಯ ನಂಬರ್ ಪ್ಲೇಟ್ ಅನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
- ಕಛೇರಿ ಹಾಗೂ ಅಧಿಕಾರಿಗಳ ನಾಮ ಫಲಕಗಳನ್ನು ಕನ್ನಡದಲ್ಲಿಯೇ ಬರೆಯತಕ್ಕದ್ದು/ಅಳವಡಿಸತಕ್ಕದ್ದು.

ಉಳಿದಂತೆ ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳಂತೆ ಕಡ್ಡಾಯವಾಗಿ ಎಲ್ಲಾ ಹಂತಗಳಲ್ಲೂ ಕನ್ನಡ ಭಾಷೆಯನ್ನೇ ಬಳಸಲು ತಮ್ಮ ತಮ್ಮ ಅಧೀನ ಕಛೇರಿ/ವಿಭಾಗಗಳಿಗೆ ಸೂಚಿಸಿ, ಸುತ್ತೋಲೆ ಹೊರಡಿಸತಕ್ಕದ್ದು.

ತಮ್ಮ ವಿಶ್ವಾಸಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಕರ್ನಾಟಕ ಸರ್ಕಾರ

**ಕನ್ನಡ ಅಭಿವೃದ್ಧಿ ಪ್ರಾಧಿಕಾರ,**

ವಿಧಾನಸೌಧ, ಬೆಂಗಳೂರು.

**ದಿನಾಂಕ: ೧೭-೧೦-೨೦೧೫**

## ಟಿಪ್ಪಣಿ

**ಪೀಠಿಕೆ:**

ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ೧೯೯೪ರಲ್ಲಿ ಶಾಸನಬದ್ಧ ಸಂಸ್ಥೆಯಾಗಿ ಎರಡು ಸದನಗಳ ಒಪ್ಪಿಗೆ ಪಡೆದು ಕಾಯ್ದೆಯನ್ನು ರೂಪಿಸಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬಹುಮುಖ್ಯವಾದ ಉದ್ದೇಶವೆಂದರೆ ಆಡಳಿತದ ಎಲ್ಲಾ ಹಂತದಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವುದು. (ಸರ್ಕಾರದ ಅಧಿಸೂಚನೆ).

ಕನ್ನಡಿಗರಿಗೆ ಉದ್ಯೋಗ ನೀಡುವ ಹಿನ್ನೆಲೆಯಲ್ಲಿ ಡಾ. ಸರೋಜಿನಿ ಮಹಿಷಿ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.

**ಈ ಉದ್ದೇಶಗಳನ್ನು ಈಡೇರಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿದೆ. ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಭಾಗ ಮಟ್ಟದಲ್ಲಿ ವಿಭಾಗಾಧಿಕಾರಿಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಉಪವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿ ಮತ್ತು ತಾಲೂಕು ಮಟ್ಟದಲ್ಲಿ ತಹಶೀಲ್ದಾರರನ್ನು ಜವಾಬ್ದಾರರನ್ನಾಗಿಸಿದೆ.** (ಪು.ಸಂ. ೭೫)

ಆದರೂ ಸಹ ಸರ್ಕಾರದ ನಿರೀಕ್ಷೆಯಂತೆ ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡ ಅನುಷ್ಠಾನವಾಗದಿರುವುದು ಹಾಗೂ ರಾಜ್ಯದಲ್ಲಿ ಡಾ. ಸರೋಜಿನಿ ಮಹಿಷಿ ವರದಿಯನ್ವಯ ಕನ್ನಡಿಗರಿಗೆ ಉದ್ಯೋಗ ದೊರಕಿಸದಿರುವುದು ತುಂಬ ನೋವಿನ ಸಂಗತಿ.

ಈ ಹಿನ್ನೆಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಡಳಿತ ಕೇಂದ್ರದಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಆರಂಭಿಸಿ, ಆ ಮೂಲಕ ಎಲ್ಲಾ ಸಚಿವಾಲಯಗಳಿಗೆ ಭೇಟಿ ನೀಡಿ ಪರಿಶೀಲಿಸುವ ಮೂಲಕ ಆಡಳಿತದಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಪಣತೊಟ್ಟಿದೆ.

**ಆಡಳಿತದಲ್ಲಿ ಕನ್ನಡ ಅನುಷ್ಠಾನ:**

- ಆಡಳಿತದಲ್ಲಿ ಪರಿಣಾಮಕಾರಿ ಕನ್ನಡ ಅನುಷ್ಠಾನ ಮಾಡುವ ಸಂಬಂಧ ಹಲವಾರು ಆದೇಶ, ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಆ ಸುತ್ತೋಲೆಗಳ ಪ್ರತಿಯನ್ನು ನಿಮ್ಮೆಲ್ಲರಿಗೂ ತಲುಪಿಸಿದೆ. ಸರ್ಕಾರದ ಆದೇಶ/ಸುತ್ತೋಲೆಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ತಮ್ಮದಾಗಿರುತ್ತದೆ. ಇದನ್ನು ಉಲ್ಲಂಘಿಸಿದವರಿಗೆ (ಅಧಿಕಾರಿ/ನೌಕರರಿಗೆ) ಈ ಕೆಳಕಂಡ **ಶಿಸ್ತುಕ್ರಮಗಳನ್ನು ನೇಮಕಾತಿ ಪ್ರಾಧಿಕಾರ ಕೈಗೊಳ್ಳುವ ಅಧಿಕಾರ** ನೀಡಿದೆ. (ಪು.ಸಂ. ೧೨೧)

    - ವಾಗ್ದಂಡನೆ
    - ವಾರ್ಷಿಕ ವೇತನ, ಬಡ್ತಿಯನ್ನು ತಡೆಹಿಡಿಯುವುದು.
    - ಪದೋನ್ನತಿಯನ್ನು ತಡೆಹಿಡಿಯುವುದು
    - ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು

ಕನ್ನಡ ಅನುಷ್ಠಾನ ಮಾಡದವರ ವಿರುದ್ಧ ಇನ್ನು ಮುಂದೆ ಶಿಸ್ತು ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿಗಳು ಕೂಡ ಎಲ್ಲಾ ಅಧಿಕಾರಿಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡುವುದು ಅತ್ಯಗತ್ಯವಾಗಿದೆ.

- **ಸಚಿವಾಲಯದ ಮಟ್ಟದಲ್ಲಿ ಕನ್ನಡ ಅನುಷ್ಠಾನ ಸಮಿತಿ/ವಿಭಾಗವನ್ನು** ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಲು ಆದೇಶವನ್ನು ಹೊರಡಿಸಿದೆ. ಈ ಸಮಿತಿಯ ಹೊಣೆಗಾರಿಕೆಯು ಕೆಳಕಂಡಂತಿರುತ್ತದೆ.

    - ಕನ್ನಡ ಅನುಷ್ಠಾನ ವಿಭಾಗವು ಮೂರು ತಿಂಗಳಿಗೊಮ್ಮೆ ಸಚಿವಾಲಯದಲ್ಲಿ ಕನ್ನಡ ಅನುಷ್ಠಾನದ ಕೆಲಸಗಳನ್ನು ಪರಿಶೀಲಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾಹಿತಿ ನೀಡುವುದು.
    - ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಾಲಕಾಲಕ್ಕೆ ಶಿಫಾರಸ್ಸು ಮಾಡುವ ಶಿಸ್ತು ಕ್ರಮದ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಗೊಳಿಸಿ, ಸೂಕ್ತ ಕ್ರಮ ಕೈಗೊಳ್ಳಲು ನೆರವಾಗುವುದು.
    - ಕೇಂದ್ರ ಸರ್ಕಾರ ಹಾಗೂ ಅನ್ಯ ರಾಜ್ಯಗಳ ಜೊತೆ ಪತ್ರವ್ಯವಹಾರಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪತ್ರ ವ್ಯವಹಾರಗಳನ್ನು ಕನ್ನಡದಲ್ಲಿ ಇರುವಂತೆ ನೋಡಿಕೊಳ್ಳುವುದು.

- ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು (ಸದಸ್ಯ ಕಾರ್ಯದರ್ಶಿ) ಈ ಸಮಿತಿಯ ಸಭೆಗಳನ್ನು ಏರ್ಪಡಿಸುವುದಲ್ಲದೆ, ಸಭೆಯ ನಡವಳಿಗಳನ್ನು ಹೊರಡಿಸತಕ್ಕದ್ದು.

ಆದರೆ ಸಚಿವಾಲಯ ಮಟ್ಟದಲ್ಲಿನ ಕನ್ನಡ ಅನುಷ್ಠಾನ ಸಮಿತಿಯಿಂದ ಇದುವರೆಗೂ ಯಾವದೇ ವರದಿಯು ಪ್ರಾಧಿಕಾರಕ್ಕೆ ಬಂದಿರುವುದಿಲ್ಲ. (ಪು.ಸಂ. ೧೦೩&೧೧೭)

- ➤ ಸಚಿವಾಲಯ ಹಂತದಲ್ಲಿ ಹೊರಡಿಸುವ ಎಲ್ಲಾ ಆದೇಶಗಳು, ಸುತ್ತೋಲೆಗಳು, ಅಧಿಸೂಚನೆಗಳ ಪ್ರತಿಯನ್ನು ಹಾಗೂ ಎಲ್ಲಾ ಇಲಾಖೆಯ ಸ್ವೀಕೃತಿ ಮತ್ತು ರವಾನೆ ಶಾಖೆಗಳ ಜಾಹಿರ್ನಾಮೆ, ಪರಿಪತ್ರ, ನಡವಳಿಗಳ ಒಂದೊಂದು ಪ್ರತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸುವುದು. (ಪು.ಸಂ.೩೯)
- ➤ ಸುತ್ತೋಲೆಗಳು/ ಆದೇಶಗಳು/ ನೋಟೀಸುಗಳು/ ಅಧಿಕೃತ ಜ್ಞಾಪನ/ ಅಧಿಸೂಚನೆಗಳು ಕಡ್ಡಾಯವಾಗಿ ಕನ್ನಡದಲ್ಲಿರತಕ್ಕದು.
- ➤ ಸಿಬ್ಬಂದಿ ಹಾಜರಾತಿ ವಹಿ/ ಸ್ವೀಕೃತಿ ವಹಿ/ ರವಾನೆ ವಹಿ/ ಕಛೇರಿ ಒಳಗಿನ ಮತ್ತು ಹೊರಗಿನ ನಾಮಫಲಕಗಳು ಕಡ್ಡಾಯವಾಗಿ ಕನ್ನಡದಲ್ಲಿ ಇರಬೇಕು.
- ➤ ಎಲ್ಲಾ ಕಾಗದದ ತಲೆಬರಹಗಳು (ಲೆಟರ್ ಹೆಡ್ಸ್)/ ವಿಸಿಟಿಂಗ್ ಕಾರ್ಡ್‌ಗಳು / ಮೊಹರುಗಳು ಕನ್ನಡದಲ್ಲಿರತಕ್ಕದ್ದು ಮತ್ತು ಭಾಷಣಗಳು (ಅವಶ್ಯಕತೆಯಿದ್ದಲ್ಲಿ ಆಂಗ್ಲದಲ್ಲಿ) ಲೆಕ್ಕಪತ್ರಗಳು, ಇತರೆ ವಹಿಗಳು, ರಿಜಿಸ್ಟರ್‌ಗಳು ಕನ್ನಡದಲ್ಲಿಯೇ ಇರಬೇಕು.
- ➤ ಅರ್ಜಿ ನಮೂನೆಗಳು/ ಪ್ರಕಟಣೆಗಳು/ ದೈನಂದಿನ ಜಾಹಿರಾತುಗಳು/ ಲೈಸನ್ಸ್‌ಗಳು/ ಟೆಂಡರ್‌ಗಳು ಕನ್ನಡದಲ್ಲಿ ಇರಬೇಕು.

  ಅ. ಕಡತಗಳಲ್ಲಿ ಬರೆಯುವ ಟಿಪ್ಪಣಿಗಳು, ಸಭೆಯ ನಡವಳಿಕೆಗಳು, ಪ್ರಕಟಣೆಗಳು, ನೋಟೀಸುಗಳು, ಫಾರಂಗಳು, ಸರ್ಟಿಫಿಕೇಟ್‌ಗಳು ಹಾಗೂ ಪತ್ರ ವ್ಯವಹಾರಗಳು ಕನ್ನಡದಲ್ಲಿರುವುದು ಹಾಗೂ ಕನ್ನಡದಲ್ಲಿರದಿದ್ದರೆ ಸಂಬಂಧಪಟ್ಟವರಿಗೆ ಹಿಂದಿರುಗಿಸುವಂತೆ ನಿರ್ದೇಶನ ನೀಡುವುದು.

  ಆ. ರಾಜ್ಯದ ಒಳಗಡೆ ನಡೆಸುವ ಪತ್ರ ವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲಿರುವಂತೆ ನಿರ್ದೇಶನ ನೀಡುವುದು.
- ➤ ಕರ್ನಾಟಕ ರಾಜ್ಯ ಶಾಸನ ಸಭೆಗಳಿಗೆ ಒದಗಿಸುವ/ ಮಂಡಿಸುವ ಎಲ್ಲ ಬಿಲ್ಲುಗಳು, ಮಸೂದೆಗಳು, ಇಲಾಖಾ ವಾರ್ಷಿಕ ಆಡಳಿತ ವರದಿಗಳು, ಇಲಾಖಾ ವಾರ್ಷಿಕ ವರದಿಗಳು, ಆಯವ್ಯಯ ದಾಖಲೆಗಳು ಇತ್ಯಾದಿಗಳನ್ನು ಕನ್ನಡದಲ್ಲಿಯೇ ನೀಡುವುದು.
- ➤ ಸಭೆಯ ಸೂಚನೆ, ಸಭೆಯ ಕಾರ್ಯಸೂಚಿ ಮತ್ತು ಸಭೆಯ ಸಂಕ್ಷಿಪ್ತ ಟಿಪ್ಪಣಿ/ನಡವಳಿಗಳನ್ನು ಕನ್ನಡದಲ್ಲಿ ತಯಾರಿಸಬೇಕು ಮತ್ತು ಇಲಾಖಾ ತನಿಖಾ ವರದಿಯಲ್ಲಿ ಕನ್ನಡವನ್ನು ಬಳಸಬೇಕು.
- ➤ ತಮ್ಮ ಇಲಾಖೆಯ ವತಿಯಿಂದ ನಡೆಸುವ ಸಮಾರಂಭಗಳ ಬ್ಯಾನರ್‌ಗಳಲ್ಲಿ (ನಾಮಪಟ್ಟಿಗಳಲ್ಲಿ) ಕನ್ನಡವನ್ನು ಬಳಸಲಾಗುತ್ತಿರುವ ವಿವರ.
- ➤ ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಮೀಕ್ಷಾ ವರದಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿದ ವಿವರಗಳು.
- ➤ ಕನ್ನಡ ಅಭಿವೃದ್ಧಿಯ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರಿರರನ್ನಾಗಿ ಮಾಡಿರುವ ಅಧಿಕಾರಿಗಳ ತನಿಖಾ ತಂಡವನ್ನು ಸರ್ಕಾರದ ಆದೇಶದಂತೆ ಎಲ್ಲಾ ಇಲಾಖೆಗಳಲ್ಲಿ ರಚನೆ ಮಾಡುವುದು. (ಪು.ಸಂ.೪೮-೪೯)
- ➤ ಇಲಾಖೆಯ ಎಲ್ಲಾ ಸಭೆಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿಯನ್ನು ಒಂದು ಅಂಶವಾಗಿ ತೆಗೆದುಕೊಂಡು ಪರಿಶೀಲನೆ ನಡೆಸುವುದು ಕಡ್ಡಾಯ. ಈ ಬಗ್ಗೆ ಮತ್ತೊಮ್ಮೆ ಸೂಚನೆ ನೀಡುವುದು.
- ➤ ನೌಕರರಿಗೆ ನೀಡುವ ನೋಟೀಸುಗಳು, ನೇಮಕಾತಿ, ವರ್ಗಾವಣೆ ಮತ್ತು ರಜೆ ಮಂಜೂರಾತಿ ಆದೇಶಗಳು ಕಡ್ಡಾಯವಾಗಿ ಕನ್ನಡದಲ್ಲಿ ಹೊರಡಿಸುವುದು.
- ➤ ಎಸ್.ಎಲ್.ಬಿ.ಸಿ. ಸಭೆ (ರಾಜ್ಯಮಟ್ಟದ ಬ್ಯಾಂಕ್ ಅಧಿಕಾರಿಗಳ ಸಭೆ)ಯ ನಿರ್ಧಾರದಂತೆ ಕಡ್ಡಾಯವಾಗಿ ಗ್ರಾಹಕರೊಂದಿಗಿನ ಎಲ್ಲ ವ್ಯವಹಾರಗಳು, ಬ್ಯಾಂಕ್‌ಗಳ ಚಲನ್‌ಗಳು, ರಸೀದಿಗಳು, ಪ್ರಸ್ತಾವನೆಗಳು, ಅರ್ಜಿಗಳು, ತಿಳುವಳಿಕೆ ಪತ್ರ, ಹಾಗೂ ಇತರೆ ಜನಸಾಮಾನ್ಯರಿಗೆ ನೀಡುವ ಎಲ್ಲ ನಮೂನೆಗಳನ್ನು ತ್ರಿಭಾಷಾ ಸೂತ್ರದನ್ವಯ ಕನ್ನಡದಲ್ಲಿ ಪ್ರಧಾನವಾಗಿರುವಂತೆ ಮುದ್ರಿಸಿರಬೇಕು ಎಂದು ಎಸ್‌ಎಲ್‌ಬಿಸಿ ಸಭೆಯಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವುದು. ಎಲ್ಲಾ ಗ್ರಾಹಕ ಸೇವೆಗಳು ಸ್ಥಳೀಯ ಭಾಷೆಯಲ್ಲಿ ಸಿಗಲೇಬೇಕು ಎನ್ನುವಂತಹ ನಿಯಮವನ್ನು **"Consumer Protection Law"** ನಲ್ಲಿ ತಿದ್ದುಪಡಿ ಮಾಡಿ ಸೇರಿಸಲು ಪ್ರಯತ್ನಗಳು ಆಗಬೇಕು.

➢ ಎಲ್ಲಾ ಇಲಾಖೆಗಳ ಜಾಲತಾಣ (ವೆಬ್‌ಸೈಟ್)ಗಳಲ್ಲಿ ಕನ್ನಡವು ಪ್ರಧಾನ ಭಾಷೆಯಾಗಬೇಕು. ಇತರ ಭಾಷೆಗಳು ಆಯ್ಕೆ ಭಾಷೆಯಾಗಿರಬೇಕು. ಆದರೆ ಹಲವಾರು ಇಲಾಖೆಗಳಲ್ಲಿ ಕನ್ನಡ ಭಾಷೆಯನ್ನೇ ಬಳಸಿಲ್ಲ. ಇದು ಇಲಾಖಾ ಮುಖ್ಯಸ್ಥರ ಕನ್ನಡ ವಿರೋಧಿತನವನ್ನು ತೋರಿಸುತ್ತದೆ.

ಅಂತರ್‌ಜಾಲ ತಾಣದಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸುತ್ತಿರುವ ಇಲಾಖೆಗಳ ಸಂಖ್ಯೆ ೧೭, ಕನ್ನಡವನ್ನು ಆಯ್ಕೆ ಭಾಷೆಯಾಗಿ ಬಳಸುತ್ತಿರುವ ಇಲಾಖೆಗಳ ಸಂಖ್ಯೆ ೨೭, ಕನ್ನಡವನ್ನು ಬಳಸದಿರುವ ಇಲಾಖೆಗಳ ಸಂಖ್ಯೆ ೧೦೪. ಸರ್ಕಾರಿ ಅಂತರ್‌ಜಾಲತಾಣದಲ್ಲಿ ಒಟ್ಟು ೨೧೫೩ ಪುಟಗಳು ಇದ್ದು ಇದರಲ್ಲಿ ಸುಮಾರು ೨೦೦ ಮಾತ್ರ ಕನ್ನಡದಲ್ಲಿವೆ ಉಳಿದ ಎಲ್ಲ ಮಾಹಿತಿಯು ಆಂಗ್ಲಭಾಷೆಯಲ್ಲಿದೆ.

ರಾಜ್ಯ ಸರ್ಕಾರದ ಫೇಸ್‌ಬುಕ್, ಟ್ವಿಟರ್ ಮೊದಲಾದ ಸಾಮಾಜಿಕ ತಾಣಗಳ ಖಾತೆಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸಬೇಕು. ರಾಜ್ಯ ಸರ್ಕಾರಿ ಸಂಸ್ಥೆಗಳಿಂದ ಹೊರತರಲಾಗುವ ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ಕನ್ನಡದ ಆಯ್ಕೆ ಕಡ್ಡಾಯವಾಗಿ ಇರಬೇಕು. ರಾಜ್ಯ ಸರ್ಕಾರಿ ಸಂಸ್ಥೆಗಳಿಂದ ಮೊಬೈಲ್ ಮೂಲಕ ಕೊಡಲಾಗುವ ಮಾಹಿತಿಯನ್ನು ಕನ್ನಡದಲ್ಲಿ ನೀಡಬೇಕು.

➢ ಮಾಹಿತಿ ಹಕ್ಕು ಅಧಿನಿಯಮದಡಿ ಬರುವಂತಹ ಪ್ರಶ್ನೆಗಳಿಗೆ ಕನ್ನಡದಲ್ಲಿ ಮಾಹಿತಿಯನ್ನು ನೀಡುವ ಸಂಬಂಧ ಮಾಹಿತಿ ಆಯೋಗಕ್ಕೆ ಹಾಗೂ ಮಾಹಿತಿ ಹಕ್ಕು ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.
➢ ಎಲ್ಲಾ ಇಲಾಖೆಯ ಸರ್ಕಾರಿ ವಾಹನಗಳ ಮೇಲೆ ಕನ್ನಡ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಅಳವಡಿಸಲು ನಿರ್ದೇಶನ ನೀಡುವುದು.
➢ ಎಲ್ಲಾ ಇಲಾಖೆಗಳು ತಮ್ಮ ಇಲಾಖೆಗಳ ಮಾಹಿತಿ ಕೈಪಿಡಿಗಳನ್ನು ಹೊರತರಬೇಕು ಮತ್ತು ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಪದವಿವರಣ ಕೋಶವನ್ನು ಮುದ್ರಿಸಿ, ಹೊರತರುವುದು.

**ಕನ್ನಡ ಅನುಷ್ಠಾನದ ಬಗ್ಗೆ ವಿವಿಧ ಇಲಾಖೆಗಳಲ್ಲಿರುವ ಲೋಪದೋಷಗಳು:**

೧. **ನಾಮಫಲಕಗಳಲ್ಲಿ ಕನ್ನಡ.** ನಾಮಫಲಕಗಳಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡುವ ದೃಷ್ಟಿಯಿಂದ ಸರ್ಕಾರವು ಪ್ರಾಧಿಕಾರದ ಮನವಿಯನ್ನು ಮನ್ನಿಸಿ, **"೨೪ಎ ಉಲ್ಲಂಘನೆಗಾಗಿ ದಂಡ"** ಎಂಬ ನಿಯಮಗಳ ಅಡಿಯಲ್ಲಿ ಸರ್ಕಾರದ ನಿಯಮವನ್ನು ಉಲ್ಲಂಘಿಸುವವರಿಗೆ **ರೂ.೧೦,೦೦೦/-**ಗಳ ದಂಡವನ್ನು ವಿಧಿಸುವ ಹಾಗೆ ಪರಿಷ್ಕೃತ ಆದೇಶವು ಹೊರಬಂದಿತು. ಈ ವಿಚಾರವಾಗಿ ಇಡಿ ರಾಜ್ಯದಲ್ಲಿ ಹೊಸ ಜಾಗೃತಿ ಮೂಡಿ ಬಹಳಷ್ಟು ಜನ ನಾಮಫಲಕದಲ್ಲಿ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡತೊಡಗಿದರು. ಆದರೆ ಈ ನಡುವೆ ವೋಡಾಫೋನ್ ಸಂಸ್ಥೆಯು ಸರ್ಕಾರದ ಕಾರ್ಮಿಕ ಇಲಾಖೆಯ ಈ ಆದೇಶವನ್ನು ಉಚ್ಚ ನ್ಯಾಯಾಲದಲ್ಲಿ ಪ್ರಶ್ನಿಸಿ, ಸದರಿ ಆದೇಶವು ಅಸಿಂಧು ಎಂದು ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ಹೊಸ ಕಾನೂನನ್ನು ರೂಪಿಸುವ ಅಗತ್ಯತೆ ತುರ್ತಾಗಿ ಆಗಬೇಕಾಗಿದೆ.

ನಾಮಫಲಕಗಳ ಆದೇಶವನ್ನು ಅನುಷ್ಠಾನಗೊಳಿಸುವ ಉಸ್ತುವಾರಿ ಹೊತ್ತಿರುವ ಕಾರ್ಮಿಕ ಇಲಾಖೆಯು ಈ ಆಜ್ಞೆಯ ಅನುಷ್ಠಾನಕ್ಕೆ ನಿಯಮಿತವಾಗಿ ಪರಿಶೀಲನೆ ನಡೆಸುವಂತೆ ಸಂಬಂಧಿಸಿದ ವಲಯ ಅಧಿಕಾರಿಗಳಿಗೆ ಕಟ್ಟು ನಿಟ್ಟಾದ ಸೂಚನೆ ನೀಡುವಂತೆ ಕಾರ್ಮಿಕ ಆಯುಕ್ತರಿಗೆ ರಾಜ್ಯ ಸರ್ಕಾರ ಆದೇಶಿಸಬೇಕು. ಈ ಬಗ್ಗೆ ಸರ್ಕಾರಕ್ಕೂ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೂ ತ್ರೈಮಾಸಿಕ ವರದಿ ಒಪ್ಪಿಸುವಂತೆ ಸೂಚಿಸಬೇಕು.

**ಅಂಗಡಿ ಮುಂಗಟ್ಟುಗಳಿಗೆ ಪರವಾನಗಿ ನೀಡುವಾಗಲೇ ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರ ಸಭೆ ಮತ್ತು ಪುರಸಭೆಗಳು, ನಾಮಫಲಕದಲ್ಲಿ ಕನ್ನಡಕ್ಕೆ ಪ್ರಥಮ ಪ್ರಾಧಾನ್ಯತೆ ನೀಡುವಂತೆ ಷರತ್ತನ್ನು ವಿಧಿಸಲು ಸರ್ಕಾರವು ಸಂಬಂಧಪಟ್ಟ ಇಲಾಖೆಗೆ ಸ್ಪಷ್ಟ ಸೂಚನೆ ನೀಡಬೇಕು. ಅಗತ್ಯ ಬಿದ್ದರೆ ಈಗಿರುವ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕು. ಜಾಹಿರಾತು ಫಲಕಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬೇಕು ಮತ್ತು ಸರ್ಕಾರದ ನಿಯಮ ಪಾಲಿಸದ ಜಾಹಿರಾತುಗಳನ್ನು ತಕ್ಷಣ ತೆರವುಗೊಳಿಸುವ/ದಂಡವಿಧಿಸುವ ಷರತ್ತು ವಿಧಿಸಿ ಅನುಮತಿ ನೀಡಬೇಕು. ಕೇಂದ್ರ ಸರ್ಕಾರದ ಎಲ್ಲಾ ಜನೋಪಯೋಗಿ ಜಾಹೀರಾತುಗಳು ಕನ್ನಡದಲ್ಲಿಯೇ ಇರಬೇಕು.**

೨. **ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಮೆಟ್ರೋ:**

ಬೆಂಗಳೂರಿನ ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವು ತನ್ನ ವಿವಿಧ ಕಾಮಗಾರಿಗಳ ನಿರ್ವಹಣೆಗೆ ಹೊರಗುತ್ತಿಗೆ ನೀಡಿರುವ ಕಂಪನಿಗಳಲ್ಲಿ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡುವ ಸಂದರ್ಭದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಒದಗಿಸುವ ಡಾ. ಸರೋಜಿನಿ ಮಹಿಷಿ ವರದಿಯನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ತ್ರಿಭಾಷಾ ಸೂತ್ರದನ್ವಯ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ಪ್ರಧಾನವಾಗಿರುವಂತೆ ಬರೆಸಿ, ಅಳವಡಿಸಬೇಕು.

೩. **ಬೆಂಗಳೂರು ಮೆಟ್ರೋ** : ಬೆಂಗಳೂರು ನಮ್ಮ ಮೆಟ್ರೋ ಸಂಸ್ಥೆಯು 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಿಗೆ ಕಡ್ಡಾಯವಾಗಿ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕು. ಉನ್ನತ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸುವುದು ಕಡ್ಡಾಯವಾಗಿದೆ.

೪. **ಕೆ.ಪಿ.ಟಿ.ಸಿ.ಎಲ್. ನೇಮಕಾತಿ** : ಕೆ.ಪಿ.ಟಿ.ಸಿ.ಎಲ್.ನಲ್ಲಿ ನಡೆಯುವ ಇಂಜಿನಿಯರ್‌ಗಳ ನೇಮಕಾತಿಯಲ್ಲಿ ಕನ್ನಡಿಗರನ್ನು ನಿರ್ಲಕ್ಷಿಸಿ, ಅನ್ಯಭಾಷಿಕರನ್ನು ಹೆಚ್ಚಾಗಿ ನೇಮಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು, ಕೂಡಲೇ ಸದರಿ ನೇಮಕಾತಿಯನ್ನು ತಡೆಹಿಡಿಯುವುದು ಮತ್ತು ನೇಮಕಾತಿ ಅಧಿಸೂಚನೆಯಲ್ಲಿ **'ಅಭ್ಯರ್ಥಿಗಳು ಕನ್ನಡ ಭಾಷೆಯ ಪರೀಕ್ಷೆಯಲ್ಲಿ ಉತ್ತೀರ್ಣ ಆಗುವುದು ಕಡ್ಡಾಯ'** ಎಂಬುದನ್ನು ಸೇರಿಸಬೇಕು ಹಾಗೂ ಡಾ. ಸರೋಜಿನಿ ಮಹಿಷಿ ವರದಿಯನ್ವಯ ಸ್ಥಳೀಯರಿಗೆ ಉದ್ಯೋಗದಲ್ಲಿ ಮೊದಲ ಆದ್ಯತೆ ನೀಡಬೇಕು.

೫. **ಗಡಿನಾಡ ಕನ್ನಡಿಗರಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ** ಒದಗಿಸಿರುವುದನ್ನು ಉದ್ಯೋಗಕ್ಕೂ ವಿಸ್ತರಿಸಬೇಕು. (ಕನ್ನಡ ಮಾಧ್ಯಮದವರಿಗೆ ಇರುವ ೫%ರಡಿಯಲ್ಲಿ) **ಗಡಿಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಲು** ಸಾಧ್ಯವಾಗುವಂತೆ ಹೊಸ ಆದೇಶವೊಂದನ್ನು ಹೊರಡಿಸಬೇಕು.

೬. **ಆರ್ಥಿಕ ಇಲಾಖೆಯ ಖಜಾನೆ-೧ ಮತ್ತು ಖಜಾನೆ-೨ರ ಜಾಲತಾಣಗಳು ಸಂಪೂರ್ಣವಾಗಿ ಆಂಗ್ಲಮಯವಾಗಿದೆ ಮತ್ತು ಇಲಾಖೆಯು ನೀಡುತ್ತಿರುವ (ಖಜಾನೆ-೨) ತರಬೇತಿಯು** ಕನ್ನಡವನ್ನು ನಿರ್ಲಕ್ಷಿಸಿ ಆಂಗ್ಲಭಾಷೆಯಲ್ಲಿ ನೀಡಲಾಗುತ್ತಿದೆ. ಕನ್ನಡ ತಂತ್ರಾಂಶವನ್ನು ಬಳಸಿ ಖಜಾನೆ-೨ನ್ನು ರೂಪಿಸುವ ಅವಕಾಶವಿದ್ದಾಗ್ಯೂ ಅದನ್ನು ನಿರ್ಲಕ್ಷಿಸಿರುವುದು ಕಂಡುಬಂದಿದೆ. ಕೂಡಲೇ ಇಲಾಖೆಯ ಜಾಲತಾಣಗಳನ್ನು ಕನ್ನಡೀಕರಿಸಬೇಕು ಮತ್ತು ಇಲಾಖೆಯಿಂದ ನೀಡಲಾಗುವ ಎಲ್ಲ ತರಬೇತಿಯನ್ನು ಕನ್ನಡದಲ್ಲಿಯೇ ನೀಡಬೇಕು.

೭. ಆಂಗ್ಲಭಾಷೆಯಲ್ಲಿ ಪತ್ರ ವ್ಯವಹಾರ ಮಾಡುತ್ತಿರುವುದಕ್ಕೆ ಸಮಜಾಯಿಸಿ ಕೋರಿ **ಪಿಂಚಣಿ ಇಲಾಖೆಯವರಿಗೆ** ಪ್ರಾಧಿಕಾರದಿಂದ ಪತ್ರ ಬರೆಯಲಾಗಿತ್ತು. ಆದರೆ ಇದುವರೆವಿಗೂ ಯಾವುದೇ ಉತ್ತರ ಬಂದಿರುವುದಿಲ್ಲ.

೮. ನಂದಿನಿ ಡೈರಿ, ಮೈಸೂರು ಸ್ಯಾಂಡಲ್ ಉತ್ಪನ್ನಗಳ ಕವಚಗಳಲ್ಲಿ ಕನ್ನಡವನ್ನು ಬಳಸುತ್ತಿಲ್ಲ, ನಂದಿನ ಡೈರಿಯವರು ಹೊರತಂದಿರುವ **ಮೊಬೈಲ್ ಆಪ್** ಸಂಪೂರ್ಣವಾಗಿ ಆಂಗ್ಲಭಾಷೆಯಲ್ಲಿದೆ.

೯. **ಡಾ. ಸರೋಜಿನಿ ಮಹಿಷಿ ವರದಿಯನನು ಕಾಲೋಚಿತಗೊಳಿಸುವುದು:**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಖಾಸಗೀವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಈ ಸಂಗತಿಯನ್ನು ಪರಿಗಣಿಸಿ ಡಾ. ಸರೋಜಿನಿ ಮಹಿಷಿ ವರದಿಯನ್ನು ಇಂದಿನ ಕಾಲಮಾನಕ್ಕೆ ಅನ್ವಯವಾಗುವ ರೀತಿಯಲ್ಲಿ ಮಾರ್ಪಡಿಸಿ, ಐ.ಟಿ./ಬಿಟಿ ಬಹುರಾಷ್ಟ್ರೀಯ ಕಂಪನಿಗಳು ಸೇರಿದಂತೆ ಎಲ್ಲಾ ಖಾಸಗಿ ಕೈಗಾರಿಕೆ, ಸಂಸ್ಥೆಗಳಲ್ಲಿ ಕನ್ನಡಿಗರಿಗೆ (ಶೇ.೭೫%) ಉದ್ಯೋಗಗಳನ್ನು ಮೀಸಲಿರಿಸಲು ಸೂಚಿಸಿ ರಾಜ್ಯ ಸರ್ಕಾರ ಆದೇಶಿಸಬೇಕು. 'ಸ್ಥಳೀಯರಿಗೆ ಉದ್ಯೋಗ ರಾಷ್ಟ್ರೀಯ ನೀತಿ, ರೂಪಿಸಲು ಸದನದಲ್ಲಿ ನಿರ್ಣಯ' ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳ ಪೂರಕ ಮಾಹಿತಿ ನೀಡಬೇಕು.

**ಅ) ವಿಶೇಷ ಅಗತ್ಯ ಕುಶಲ ತಂತ್ರಜ್ಞಾನ ತರಬೇತಿ ಶಾಲೆಗಳನ್ನು ಆರಂಭಿಸುವ ಬಗ್ಗೆ:** ಅದಾಗಲೇ ಸರೋಜಿನಿ ಮಹಿಷಿ ವರದಿಯ ಕಂಡಿಕೆ ೧೮ರಲ್ಲಿ ಸೂಚಿಸಿರುವಂತೆ ಆಧುನಿಕ ದಿನಮಾನದಲ್ಲಿ ಅಗತ್ಯವಾಗುವ ಹೊಸ ತಂತ್ರಜ್ಞಾನಗಳಿಗೆ ಬೇಕಾಗುವ ಕುಶಲ ಕಾರ್ಮಿಕರನ್ನು ಸಿದ್ಧಪಡಿಸಲು ಅನುವಾಗುವಂತಹ ನವೀನ ಪಠ್ಯಗಳನ್ನು/ಕೋರ್ಸ್‌ಗಳನ್ನು ಸರ್ಕಾರವೇ ನಡೆಸುತ್ತಿರುವ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಪ್ರಶಿಕ್ಷು(ಅಪ್ರೆಂಟಿಸು) ತರಬೇತಿಯನ್ನು ಆರಂಭಿಸಬೇಕು. ಇದಕ್ಕಾಗಿ ರಾಜ್ಯ ಸರ್ಕಾರವು ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಸೂಕ್ತ ನಿರ್ದೇಶನಗಳನ್ನು ಶೀಘ್ರವಾಗಿ ನೀಡಬೇಕು. ಇಂತಹ ಆಧುನಿಕ ತರಬೇತಿಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಆರಂಭಿಸಬೇಕು. ಇದರಿಂದ ಅನೇಕ ಕೌಶಲಗಳಿಗೆ ಕನ್ನಡಿಗರೇ ದೊರೆಯುತ್ತಿಲ್ಲ ಎಂಬ ಕೂಗಿಗೆ ಪರಿಹಾರ ದೊರೆಯುತ್ತದೆ.

**ಆ)** ಕೇಂದ್ರ ಸರ್ಕಾರದ ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಸಿದ್ಧವಾಗುವ ಆಂಗ್ಲ ಪಠ್ಯ ಪುಸ್ತಕಗಳನ್ನು ಪ್ರಾದೇಶಿಕ ಭಾಷೆಗೆ ಅನುವಾದಿಸುವಾಗ ಆ ಗುತ್ತಿಗೆ ಕೆಲಸವನ್ನು ಆಯಾ ಭಾಷಾ ರಾಜ್ಯಗಳಲ್ಲಿಯೇ ನೀಡಬೇಕು. (ಉದಾ: ಐಟಿಐ ಪಠ್ಯಗಳ ಕನ್ನಡ ಭಾಷಾನುವಾದದ ಗುತ್ತಿಗೆಯನ್ನು ಈಗಾಗಲೇ ತಮಿಳುನಾಡಿನ ಸಂಸ್ಥೆಯೊಂದಕ್ಕೆ ನೀಡಲಾಗಿದೆ) ಇಂತಹ ಪಠ್ಯಗಳ ಮುದ್ರಣವೂ ಸಹ ಕರ್ನಾಟಕದಲ್ಲಿಯೇ ಆಗುವಂತೆ ಎಚ್ಚರವಹಿಸಬೇಕು.

**ಇ)** ಬ್ಯಾಂಕ್, ರೈಲ್ವೆ, ಸ್ಟಾಫ್‌ಸೆಲೆಕ್ಷನ್ ಕಮಿಷನ್ ಮುಂತಾದ ಕಡೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಸೂಕ್ತ ತರಬೇತಿಯಿಲ್ಲದೇ ಕನ್ನಡಿಗರು ಉದ್ಯೋಗದಿಂದ ಅವಕಾಶವಂಚಿತರಾಗುತ್ತಿದ್ದಾರೆ. ಕೇರಳ, ಬಿಹಾರ, ಆಂಧ್ರಪ್ರದೇಶಗಳಲ್ಲಿ ಇಂತಹ ಪರೀಕ್ಷೆಗಳಿಗೆ ತರಬೇತಿ ನೀಡಲು ಸಾಕಷ್ಟು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿವೆ. ಕರ್ನಾಟಕದಲ್ಲೂ ಇಂತಹ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕು. ಸಂದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂದು ಪಠ್ಯಕ್ರಮವನ್ನು ಪಿ.ಯು.ಸಿ. ಪಠ್ಯದಲ್ಲಿ ಅಳವಡಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು.

**ಈ)** ಕನ್ನಡಿಗರಲ್ಲಿ ಉದ್ಯಮಶೀಲತೆ ಬೆಳೆಸುವಂಥ ತರಬೇತಿ ನೀಡಲು ಒಂದು ವ್ಯವಸ್ಥೆಯಾಗಬೇಕು. ರಾಜ್ಯದಲ್ಲಿ ಉದ್ಯಮ ಸ್ಥಾಪಿಸಲು ಮುಂದೆ ಬರುವ ಕನ್ನಡಿಗರಿಗೆ ಎಲ್ಲ ಹಂತಗಳಲ್ಲಿ ಮಾರ್ಗದರ್ಶನ ಮಾಡಲು **'ಉದ್ಯೋಗ ಮಿತ್ರ'**ದ ಪ್ರತ್ಯೇಕ ಘಟಕ ಅಸ್ತಿತ್ವಕ್ಕೆ ಬರಬೇಕು. ಕಡಿಮೆದರದಲ್ಲಿ ಸಾಲ ನೀಡುವ ಮತ್ತು ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸುವ ಪ್ರಯತ್ನ ಮಾಡಬೇಕು.

**ಉ) ಖಾಸಗಿ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಕನ್ನಡ:** ಇಂದು ಎಲ್ಲಾ ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೇವಲ ಆಂಗ್ಲಭಾಷೆ ಮಾತ್ರ ಕಾಣಿಸಿಕೊಳ್ಳುತ್ತಿದೆ. ಕನ್ನಡಕ್ಕೆ ಸ್ಥಾನವೇ ಇಲ್ಲವಾಗಿದೆ. ರಾಜ್ಯ ಸರ್ಕಾರವು ತುರ್ತಾಗಿ ಈ ಎಲ್ಲಾ ಸಂಸ್ಥೆಗಳಿಗೆ ಪತ್ರಬರೆದು ಸಂಸ್ಥೆಯ ನಾಮಫಲಕ ಆದೇಶ ಜಾಹೀರಾತುಗಳು ಎಲ್ಲದರಲ್ಲಿಯೂ ಕನ್ನಡ ಭಾಷೆಗೆ ಆದ್ಯತೆ ಇರಬೇಕೆಂದು ಮತ್ತು ಉದ್ಯೋಗದಲ್ಲಿ ಕನ್ನಡಿಗರಿಗೆ ಗರಿಷ್ಟ ಅವಕಾಶ ನೀಡಬೇಕೆಂದು ಆದೇಶಿಸಬೇಕು.

ಕೇಂದ್ರ ಸರ್ಕಾರ, ಸಾರ್ವಜನಿಕ ವಲಯ, ಖಾಸಗಿ ವಲಯದ ಉದ್ಯಮಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನೂ ಕಡ್ಡಾಯಗೊಳಿಸಿ ಅದನ್ನು ನಿಯಮಿತವಾಗಿ ಪರಿಶೀಲಿಸಲು ಕಾರ್ಮಿಕ ಇಲಾಖೆಯವರು ಕ್ರಮಕೈಗೊಳ್ಳಬೇಕು ಹಾಗೂ ಕೇಂದ್ರ ಸರ್ಕಾರ ನಡೆಸುವ ಎಲ್ಲ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲೂ ಬರೆಯಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕು.

೧೦. **ವಾರ್ಷಿಕ ನೇಮಕಾತಿಗಳ ವರದಿಯನ್ನು ತರಿಸಿಕೊಳ್ಳುವ ಬಗ್ಗೆ:** ಕರ್ನಾಟಕ ರಾಜ್ಯದಲ್ಲಿ ಇರುವ ಎಲ್ಲ ರೀತಿಯ ಉದ್ಯಮಗಳಲ್ಲಿ ಕಾಲ ಕಾಲಕ್ಕೆ ಹೊಸ ನೇಮಕಾತಿಗಳು ಆಗುತ್ತಲೇ ಇರುತ್ತದೆ. ಇಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶಗಳ ದೊರಕುತ್ತಿವೆಯೇ? ಎಂಬ ಪರಿಶೀಲನೆಯಾಗಬೇಕಾದುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮಹಾರಾಷ್ಟ್ರ ಸರ್ಕಾರವು ಅದಾಗಲೇ ಆದೇಶವೊಂದನ್ನು ಜಾರಿ ಮಾಡಿ ಪ್ರತೀ ವರ್ಷ ಎಲ್ಲಾ ಉದ್ದಿಮೆ ಹಾಗೂ ಸಂಸ್ಥೆಗಳಲ್ಲಿ ಮರಾಠಿ ಭಾಷಿಕರಿಗೆ ಎಷ್ಟು ಉದ್ಯೋಗ ನೀಡಲಾಗಿದೆ ಎಂಬ ವರದಿಯನ್ನು ತರಿಸಿಕೊಳ್ಳುತ್ತಿದೆ. ಅದೇ ಮಾದರಿಯಲ್ಲಿ ಕರ್ನಾಟಕ ಸರ್ಕಾರವು ಸಹ ರಾಜ್ಯದಲ್ಲಿನ ಎಲ್ಲಾ ಉದ್ದಿಮೆ ಹಾಗೂ ಸಂಸ್ಥೆಗಳಲ್ಲಿ ಆದ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಎಷ್ಟು ಉದ್ಯೋಗಗಳು ಸಿಕ್ಕಿವೆ ಎಂಬುದರ ಪರಿಶೀಲನೆಗಾಗಿ ಆದೇಶವೊಂದನ್ನು ಹೊರಡಿಸಿ, ನಿಯಮಿತವಾಗಿ ವರದಿಗಳನ್ನು ಪಡೆದು ಸ್ಥಳೀಯ ಭಾಷಿಕರ ಹಿತಕಾಯಬೇಕು. ಈ ಜವಾಬ್ದಾರಿಯನ್ನು ಕರ್ನಾಟಕ ಸರ್ಕಾರದ ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಗಳೇ ಕಾರ್ಯಗತಗೊಳಿಸಬೇಕು ಹಾಗೂ ಈ ಮಾಹಿತಿಯನ್ನು ಪ್ರಾಧಿಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸಬೇಕು.

೧೧. **ಕೇಂದ್ರದ ಹಾಗೂ ರಾಜ್ಯದಲ್ಲಿನ ಎಲ್ಲಾ ಉದ್ಯೋಗ ಮಾಹಿತಿಯು ರಾಜ್ಯ ಸರ್ಕಾರದ ಅಂತರ್‌ಜಾಲದಲ್ಲಿ:**
ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಉದ್ಯೋಗ ಮಾಹಿತಿಯು ಕರ್ನಾಟಕ ಸರ್ಕಾರದ ಅಂತರ್ ಜಾಲತಾಣಗಳಲ್ಲಿ ಕನ್ನಡದಲ್ಲಿಯೇ ಲಭ್ಯವಾಗುವಂತಾಗಬೇಕು. ಇದಕ್ಕಾಗಿ ರಾಜ್ಯ ಸರ್ಕಾರದ ಭಾಷಾಂತರ ಇಲಾಖೆ ಮತ್ತು ಇ-ಆಡಳಿತ ವಿಭಾಗಗಳಿಗೆ ಸರ್ಕಾರವು ವಿಶೇಷ ಸೂಚನೆಯನ್ನು ನೀಡಬೇಕು. ಕೇಂದ್ರ ಸರ್ಕಾರವು ಪ್ರಕಟಿಸುವ ಸೆಂಟ್ರಲ್ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯು ಸ್ಥಳೀಯ ಭಾಷೆಯಲ್ಲಿ ಸಿಗಬೇಕು ಮತ್ತು ಎಲ್ಲಾ ರೀತಿಯ (ಖಾಸಗಿ/ಕೇಂದ್ರ/ರಾಜ್ಯ ಸರ್ಕಾರದ) ಉದ್ಯೋಗ ಮಾಹಿತಿಯು ಸ್ಥಳೀಯರಿಗೆ ಸ್ಥಳೀಯ ಭಾಷೆಯಲ್ಲಿಯೇ ದೊರಕುವಂತಾಗಲೂ ರಾಜ್ಯ ಸರ್ಕಾರವು ಆದೇಶ ಹೊರಡಿಸಬೇಕು.

೧೨. **ಎಲ್ಲಾ ಉದ್ದಿಮೆಗಳು ಹಾಗೂ ಸಂಸ್ಥೆಗಳಲ್ಲಿ ಕನ್ನಡ ಕೇಂದ್ರ ತೆರೆಯುವುದು:** ರಾಜ್ಯದಲ್ಲಿರುವ ಆಯಾ ಇಲಾಖಾ ಅಧೀನದ ಎಲ್ಲಾ ಉದ್ದಿಮೆಗಳಲ್ಲಿ (ಖಾಸಗಿ, ಅರೆ ಸರ್ಕಾರಿ, ಸರ್ಕಾರಿ ಸಂಸ್ಥೆಗಳಲ್ಲಿ) ರಾಜ್ಯ ಸರ್ಕಾರವೇ ಮುಂದಾಗಿ ನಿಂತು ಕನ್ನಡ ಕೇಂದ್ರಗಳನ್ನು ಆರಂಭಿಸಬೇಕು. ಅದಾಗಲೇ ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ **'ಹಿಂದಿ ಸೆಲ್'** ಮಾದರಿಯಲ್ಲಿ **'ಕನ್ನಡ ಕೇಂದ್ರ'**ಗಳು ಇರಬೇಕು. ಕನ್ನಡೇತರರಿಗೆ ಕನ್ನಡವನ್ನು ಕಲಿಸುವ, ಆ ಉದ್ದಿಮೆಗಳಲ್ಲಿ ಆದೇಶಗಳು ಕನ್ನಡದಲ್ಲಿಯೇ ಇರುವಂತೆ ನೋಡಿಕೊಳ್ಳುವ, ಕನ್ನಡ ಕಾರ್ಮಿಕರಿಗಾಗಿ ಕನ್ನಡದ ಚಟುವಟಿಕೆಗಳನ್ನು ನಡೆಸುತ್ತಾ ಕನ್ನಡ ಕೇಂದ್ರದಲ್ಲಿ ಗ್ರಂಥಾಲಯವನ್ನೂ ನಡೆಸುತ್ತಾ, **'ಕನ್ನಡ ವಾತಾವರಣ'**ವು ಶಾಶ್ವತವಾಗಿ ಉಳಿಯುವಂತೆ ಈ ಕೇಂದ್ರಗಳು ನೋಡಿಕೊಳ್ಳಬೇಕು.

೧೩. **ಕಾರ್ಮಿಕ ನ್ಯಾಯಾಲಯಗಳು ನೀಡುವ ತೀರ್ಪು ಹಾಗೂ ಆದೇಶಗಳು ಕನ್ನಡದಲ್ಲಿಯೇ ಇರಬೇಕು:**
ನಮ್ಮ ನಾಡಿನಲ್ಲಿರುವ ಎಲ್ಲಾ ಕಾರ್ಮಿಕ ವ್ಯಾಜ್ಯಗಳ ತೀರ್ಪುಗಳನ್ನು ಕನ್ನಡದಲ್ಲಿಯೇ ನೀಡಿದಾಗ ಮಾತ್ರ ಕಾರ್ಮಿಕರಿಗೆ ಅದು ಅರ್ಥವಾಗಲು ಸಾಧ್ಯ ಎಂಬುದು ಸರಳ ಸತ್ಯ. ಆದರೆ ಕಾರ್ಮಿಕ ನ್ಯಾಯಾಲಯಗಳಲ್ಲಿನ ತೀರ್ಪು ಹಾಗೂ ಆದೇಶಗಳು ಇನ್ನು ಆಂಗ್ಲದಲ್ಲಿಯೇ ಬರುತ್ತಿವೆ. ರಾಜ್ಯ ಸರ್ಕಾರವು ಕಾರ್ಮಿಕ ಇಲಾಖೆಗೆ ಆದೇಶ ನೀಡಿ, ಈ ಕೂಡಲೇ ಎಲ್ಲಾ ತೀರ್ಪುಗಳು, ಆದೇಶಗಳು, ಕರಪತ್ರಗಳು ಹಾಗೂ ಪ್ರಕಟಣೆಗಳು ಕನ್ನಡದಲ್ಲಿಯೇ ಇರಬೇಕೆಂದು ತಿಳಿಸಬೇಕು.

ಕೇಂದ್ರ ಸರ್ಕಾರದ ಕಚೇರಿಗಳಲ್ಲಿ, ಖಾಸಗೀ ಉದ್ಯಮ ಕಛೇರಿಗಳಲ್ಲಿ ಬೇರೆ ರಾಜ್ಯದಲ್ಲಿರುವ ತಮ್ಮ ಶಾಖೆಗಳಿಂದ ಕಾರ್ಮಿಕರನ್ನು ಕರ್ನಾಟಕ ಶಾಖೆಗಳಿಗೆ ವರ್ಗ ಮಾಡಿಕೊಂಡು ಕನ್ನಡಿಗರಿಗೆ ಸಿಗುವ ಉದ್ಯೋಗಾವಕಾಶವನ್ನು ವಂಚಿಸಲಾಗುತ್ತಿದೆ. ಇದನ್ನು ತಪ್ಪಿಸಲು ವರ್ಗಾವಣೆಗೆ ಮುನ್ನ ಕಾರ್ಮಿಕ ಆಯುಕ್ತರ ಪೂರ್ವಾನುಮತಿ ಪಡೆಯುವಂತೆ ಸರ್ಕಾರ ಆಜ್ಞೆ ಹೊರಡಿಸಬೇಕು.

**೧೪. ಬ್ಯಾಂಕುಗಳಲ್ಲಿ ಪ್ರಕಟಣೆಗಳು ಕನ್ನಡದಲ್ಲಿರಬೇಕು:**

ಗಣಕೀಕರಣದಿಂದಾಗಿ ಗ್ರಾಮೀಣ ಬ್ಯಾಂಕು/ಆರ್ಥಿಕ ಸಂಸ್ಥೆಗಳಲ್ಲಿಯೂ ಆಂಗ್ಲಭಾಷೆಯ ಬಳಕೆ ಹೆಚ್ಚುತ್ತಿದೆ. ಇದರಿಂದಾಗಿ ಆಂಗ್ಲಭಾಷೆ ಬಾರದ ರೈತರು/ಕಾರ್ಮಿಕರಿಗೆ ಮಾಹಿತಿಯೇ ಇಲ್ಲದೆ ಅನೇಕ ಸೌಲಭ್ಯಗಳು ದೊರಕುತ್ತಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಎಲ್ಲಾ ಬ್ಯಾಂಕು ಹಾಗೂ ಆರ್ಥಿಕ ಸಂಸ್ಥೆಗಳ ಪ್ರಕಟಣೆ/ಜಾಹಿರಾತುಗಳು ಮತ್ತು ವ್ಯವಹಾರಗಳು ಕನ್ನಡದಲ್ಲಿಯೇ ಇರುವಂತೆ ಆದೇಶ ಹೊರಡಿಸಬೇಕು.

**೧೫. ಕೇಂದ್ರೀಯ ಶಾಲೆಗಳು/ನವೋದಯ ಶಾಲೆಗಳಲ್ಲಿ ಕನ್ನಡ:**

ಕರ್ನಾಟಕದಲ್ಲಿ ಆರಂಭವಾಗುವ ಎಲ್ಲಾ ಕೇಂದ್ರೀಯ ಪಠ್ಯಕ್ರಮದ (ಐಸಿಎಸ್ಸಿ/ಸಿಬಿಎಸ್‌ಸಿ) ಶಾಲೆಗಳಲ್ಲಿ ಕನ್ನಡಕ್ಕೆ ಸ್ಥಾನವೇ ಇಲ್ಲವಾಗಿದೆ ಮತ್ತು ಇಂತಹ ಶಾಲೆಗಳ ಮೂಲಕ ಹಿಂದಿಯನ್ನು ಹೇರುವ ಪ್ರಯತ್ನವನ್ನು ವ್ಯವಸ್ಥಿವಾಗಿ ಮಾಡಲಾಗುತ್ತಿದೆ. ಇದನ್ನು ತಪ್ಪಿಸಿ, ನಮ್ಮ ರಾಜ್ಯದೊಳಗೆ ಇರುವ ಇಂತಹ ಎಲ್ಲಾ ಶಾಲೆಗಳಿಗೆ ಪರವಾನಗಿ ಅಥವಾ ನಿರಾಕ್ಷೇಪಣ ಪತ್ರ ನೀಡುವಾಗ ಕನ್ನಡವನ್ನು ಕಡ್ಡಾಯವಾಗಿ ಪ್ರತೀ ವಿದ್ಯಾರ್ಥಿಗೆ ಕಲಿಸಬೇಕು ಎಂದು ನಿಬಂಧನೆಯನ್ನು ಶಿಕ್ಷಣ ಇಲಾಖೆ ವಿಧಿಸಬೇಕು.

**೧೬. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡಕ್ಕೆ ಹಾಗೂ ಕನ್ನಡಿಗರಿಗೆ ಮನ್ನಣೆ:**

- ಮೈಸೂರು ದಸರಾ, ಹಂಪಿ ಉತ್ಸವ, ಕಿತ್ತೂರು ಉತ್ಸವ ಮೊದಲಾದ ನಾಡಹಬ್ಬಗಳಲ್ಲಿ ಕರ್ನಾಟಕದ ಸೊಗಡನ್ನು ಎತ್ತಿ ಹಿಡಿಯುವಂಥಹ ಕಾರ್ಯಕ್ರಮಗಳನ್ನೇ ಆಯೋಜಿಸಬೇಕು.
- ಈ ಹಬ್ಬಗಳ ಬಗ್ಗೆ ಮಾಹಿತಿ ನೀಡುವ ಅಂತರ್ಜಾಲ ತಾಣಗಳಲ್ಲಿ ಕಡ್ಡಾಯವಾಗಿ ಹಾಗೂ ಪ್ರಾಥಮಿಕ ಆಯ್ಕೆಯಾಗಿ ಕನ್ನಡದ ಬಳಕೆ ಮಾಡಬೇಕು.
- ಈ ಹಬ್ಬಗಳಲ್ಲಿ ಕನ್ನಡೇತರಿಗೆ ಮಣೆ ಹಾಕದೆ ಕನ್ನಡಿಗರಿಗೆ ಅವಕಾಶಗಳನ್ನು ಕಲ್ಪಿಸಬೇಕು.
- ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ಸಂಸ್ಥೆಗಳಲ್ಲಿ ಕೊಡಲಾಗುವ ಮನೋರಂಜನೆ ಕನ್ನಡದ್ದೇ (ಕನ್ನಡ ಹಾಡುಗಳು, ಚಿತ್ರಗಳು) ಆಗಿರಬೇಕು.

**೧೭. ವರ್ಗಾವಣೆ ಆದೇಶಗಳು/ ಸರ್ಕಾರಿ ಆದೇಶಗಳು :**

ಐ.ಎ.ಎಸ್./ಐ.ಪಿ.ಎಸ್./ಕೆ.ಎ.ಎಸ್./ರಾಜ್ಯ ಪೋಲೀಸ್ ಅಧಿಕಾರಿಗಳ ವರ್ಗಾವಣೆ ಆದೇಶಗಳು ಹಾಗೂ ಸಿ.ಆ.ಸು.ಇ. ಇಲಾಖೆಯಿಂದ ಹೊರಡಿಸುವ ಹಲವಾರು ಆದೇಶಗಳು ಕೇವಲ ಆಂಗ್ಲಭಾಷೆಯಲ್ಲಿ ಮಾತ್ರ ಹೊರಡಿಸಲಾಗುತ್ತಿದೆ. ಈ ವರ್ಗಾವಣೆ ಆದೇಶಗಳನ್ನು ಆಂಗ್ಲಭಾಷೆಯ ಜೊತೆಗೆ ಕನ್ನಡದಲ್ಲೂ ಸಹ ಕಡ್ಡಾಯವಾಗಿ ಹೊರಡಿಸಲು ಕ್ರಮ ಕೈಗೊಳ್ಳಬೇಕು.

Government of Karnataka

No. DPAR 19 SCR 2006(P)

Karnataka Government Secretariat,
Vidhana Soudha,
Bangalore, dated 7-6-2007.

## NOTIFICATION

Whereas the draft of the Karnataka Civil Services (Direct Recruitment by competitive Examinations and Selection) (General) Rules, 2006 was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990) in Notification No. DPAR 19 SCR 2006, dated 5.5.2007 and in Part IV-A of the Karnataka Gazette Extra ordinary dated 11.5.2007 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas the said Gazette was made available to the public on 11.5.2007

And whereas no objections and suggestions have been received by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) the Government of Karnataka hereby makes the following rules, namely:-

1. **Title and Commencement.**- (1) These rules may be called the Karnataka Civil Services (Direct Recruitment by Competitive Examinations and Selection) (General) (First Amendment) Rules, 2007.

(2) They shall come into force on the date of their publication in the Official Gazette.

2. **Amendment of Rule 6.**- In the Karnataka Civil Services (Direct Recruitment by Competitive Examinations and Selection) (General) Rules, 2006 (hereinafter referred to as the said rules) in rule 6.-

(i) in clause (B), in sub-clause (b), in item (iv), for the figure "12.2%" the figure and the words "12.5 percent" shall be substituted;

(ii) after clause 6(B) the following shall be inserted namely:-

"(C) Notwithstanding anything contained in clause (A) or clause (B), no candidate shall be eligible for interview in respect of technical or non-technical posts unless he qualifies in a test in Kannada language. This test shall comprise of one paper carrying maximum of 150 marks. For qualifying in this paper a candidate must secure a minimum of 50 marks. The standard of this paper shall be that of first language Kannada at SSLC level."

..2

3. **Insertion of new rule 6A.-** After rule 6 of said rules, the following shall be inserted namely:-

"6A.- Notwithstanding anything contained in rule 5, no candidate shall be eligible for appointment for which specific physical standards are prescribed in the rules of recruitment specially made, unless such candidate satisfies the prescribed physical standards."

By Order and in the name of the
Governor of Karnataka,

(DEVARAJU)
Under Secretary to Government,
Department of Personnel and Administrative
Reforms (Service Rules-I).

To:

The compiler, Karnataka Gazette for publication in the special issue of the Official Gazette dated 7-6-2007 and to supply 1000copies to the Service Rules-B section immediately.

Copy to:

1) The Chief Secretary to Government.
2) The Additional Chief Secretaries to Government.
3) The Additional Chief Secretary to Government and Development Commissioner.
4) All Principal Secretaries / Secretaries to Government.
5) All Heads of Departments.
6) All Deputy Commissioners/Chief Executive Officers of Zilla Panchayats.
7) *The Secretary, Karnataka Legislative Assembly/Council, Bangalore.
8) *The Secretary, Karnataka Public Service Commission, Park House, Bangalore.
9) *The Registrar General, High Court of Karnataka, Bangalore.
10) *The Registrar, Karnataka Lokayukta, Bangalore.
11) *The Registrar, Karnataka Administrative Tribunal, Indiranagar, Bangaore-560 038.
12) Cabinet Section [C 173 2007]
13) Weekly Gazette.
14) Guard File.

(*) with a covering letter.